ಕನ್ನಡ ದೃಶ್ಯ ಮಾಧ್ಯಮದಲ್ಲಿ ಜೀ಼ ಕನ್ನಡ ವಾಹಿನಿ ಹೊಸ ಮೈಲುಗಲ್ಲನ್ನೆ ಸ್ಥಾಪಿಸಿದೆ. ಮನರಂಜನಾ ಕಾರ್ಯಕ್ರಮಗಳನ್ನು ರೂಪಿಸುವುದರೊಂದಿಗೆ ಸಾಮಾಜಿಕ ಬದ್ಧತೆಯನ್ನೂ ಏಕಕಾಲಕ್ಕೆ ಉಳಿಸಿಕೊಳ್ಳುವತ್ತ ಹೆಜ್ಜೆ ಹಾಕುತ್ತಿದೆ. ಆರಂಭವಾದ ಕಾರ್ಯಕ್ರಮಗಳಲ್ಲಿ ಈಗಾಗಲೇ ಸರಿಗಮಪ, ಡ್ರಾಮಾ ಜೂನಿಯರ್ಸ್, ವೀಕೆಂಡ್ ವಿತ್ ರಮೇಶ್ ಹಾಗೂ ಕಾಮಿಡಿ ಕಿಲಾಡಿಗಳು ಕಿರುತೆರೆಯಲ್ಲೇ ಪ್ರಮುಖ ಕಾರ್ಯಕ್ರಮಗಳಾಗಿ ರೂಪುಗೊಂಡು ಅದ್ಭುತ ಯಶಸ್ಸು ಕಂಡಿವೆ.

ಇದೀಗ ಜೀ಼ ಕನ್ನಡ ವಾಹಿನಿ "ಕಿಲಾಡಿ ಕುಟುಂಬ" ಹೆಸರಿನಲ್ಲಿ ಮತ್ತೊಂದು ನೂತನ ಪ್ರಯತ್ನಕ್ಕೆ ಮುಂದಾಗಿದೆ. ಈಗಾಗಲೇ ನಾಡಿನಾದ್ಯಂತ ಅಪಾರ ಜನಮನ್ನಣೆ ಗಳಿಸಿರುವ "ಕಾಮಿಡಿ ಕಿಲಾಡಿಗಳು" ಕಾರ್ಯಕ್ರಮದಲ್ಲಿ ಅಂತಿಮ ಹಂತ ತಲುಪಿದ ಹತ್ತು ಜನ ಫೈನಲಿಸ್ಟ್‌ಗಳು ಈ ಕಾರ್ಯಕ್ರಮದ ಪ್ರಮುಖ ರೂವಾರಿಗಳಾಗಿ ಕಾಣಿಸಿಕೊಳ್ಳುವ ಮೂಲಕ ಮತ್ತೊಮ್ಮೆ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲಿದ್ದಾರೆ. ಕಳೆದ ಬಾರಿ ಹಾಗೂ ಈ ಬಾರಿಯ ಡ್ರಾಮಾ ಜ್ಯೂನಿಯರ್ಸ್, ಲಿಟಲ್ ಚಾಂಪಿಯನ್ಸ್, ಸರಿಗಮಪ ಹಾಗೂ ಜೀ಼ ಕನ್ನಡ ಕುಟುಂಬದ ಸದಸ್ಯರೆಲ್ಲರೂ ಈ ಕಾರ್ಯಕ್ರಮದ ವೇದಿಕೆಯನ್ನು ಹಂಚಿಕೊಳ್ಳುವುದು ವಿಶೇಷವಾಗಿರುತ್ತದೆ. "ಕಿಲಾಡಿ ಕುಟುಂಬ"ದ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ನವರಸನಾಯಕ ಜಗ್ಗೇಶ್. ಇಡೀ ಕಾರ್ಯಕ್ರಮವನ್ನು ಜಗ್ಗೇಶ್ ನಿರೂಪಣೆಯೊಂದಿಗೆ ನಡೆಸಿಕೊಡಲಿದ್ದು, ಕಿರುತೆರೆ ಇತಿಹಾಸದಲ್ಲೇ ಇದೊಂದು ನೂತನ ಪ್ರಯತ್ನವಾಗಿದೆ. "ಕಾಮಿಡಿ ಕಿಲಾಡಿಗಳು" ಕಾರ್ಯಕ್ರಮದಂತೆ "ಕಿಲಾಡಿ ಕುಟುಂಬ"ವೂ ಹಾಸ್ಯಮಿಶ್ರಿತ ನಟನೆಯನ್ನೇ ಅವಲಂಬಿಸಿರುತ್ತದೆ.

ಆದರೆ ಕೇವಲ ಹಾಸ್ಯವಷ್ಟೇ ಅಲ್ಲದೆ ಉಳಿದ ಎಲ್ಲಾ ಬಗೆಯ ರಸಗಳನ್ನು ಒಳಗೊಂಡಿರುತ್ತದೆ.

ಜೊತೆಗೆ ನಾಡಿನ ಯಾವುದೋ ಮೂಲೆಯಲ್ಲಿ ಸುಪ್ತವಾಗಿರುವ ಪ್ರತಿಭೆಗಳನ್ನು ಹುಡುಕಿ ತರುವ ಪ್ರಯತ್ನವು ಇದೇ ವೇದಿಕೆಯಲ್ಲಿ ನಡೆಯಲಿದೆ. ದಿನಕಳೆದಂತೆ ಎಲ್ಲಾ ಕಲೆಯ ಮೂಲ ಬೇರು ಎನಿಸಿಕೊಂಡಿರುವ ಜಾನಪದ ಕಲೆ ಹಾಗೂ ಕಲಾವಿದರು ಮರೆಯಾಗುತ್ತಿದ್ದಾರೆ, ಜಾನಪದ ಕಲಾವಿದರನ್ನು ಹುಡುಕಿ ಈ ಕಾರ್ಯಕ್ರಮದ ಮೂಲಕ ಮುಖ್ಯಭೂಮಿಕೆಗೆ ಕರೆತರುವ ಪ್ರಯತ್ನ ಜೀ಼ ಕನ್ನಡ ವಾಹಿನಿ ಕೈಗೆತ್ತಿಕೊಂಡಿದೆ.

ಯುವ ಪ್ರತಿಭೆಗಳಿಗೆ ಅವಕಾಶಕೊಡಲು ಮ್ಯೂಸಿಕ್ ಬ್ಯಾಂಡ್ ಸೇರಿದಂತೆ ಇನ್ನೂ ಅನೇಕ ಹೊಸ ಬಗೆಯ ಪ್ರತಿಭೆಗಳನ್ನು ನಾಡಿನ ಜನತೆಗೆ ಪರಿಚಯಿಸುವ ಪ್ರಯತ್ನವೂ ನಡೆಯಲಿದೆ. ಮನರಂಜನಾ ಮಾಧ್ಯಮದಲ್ಲಿ ಅಂದಿನಿಂದಲೂ ಅಗ್ರ ಸ್ಥಾನದಲ್ಲಿರುವುದು ಸಿನೆಮಾ. ಹಲವಾರು ವಿಶೇಷತೆಗಳ "ಕಿಲಾಡಿ ಕುಟುಂಬ"ದಲ್ಲಿ ಬಿಡುಗಡೆಗೆ ಅಣಿಯಾಗಿರುವ ಕನ್ನಡ ಸಿನೆಮಾಗಳ ಪ್ರಚಾರಕ್ಕೂ ಸೂಕ್ತ ವೇದಿಕೆಯನ್ನು ಕಲ್ಪಿಸಲಿದೆ. ಜೊತೆಗೆ ವಿಶಿಷ್ಠ ಸಾಧನೆ ಮಾಡಿದಂತಹ ಅತಿಥಿಯನ್ನು ಆಹ್ವಾನಿಸಲಾಗುವುದು.

"ಕಾಮಿಡಿ ಕಿಲಾಡಿಗಳು" ಕಾರ್ಯಕ್ರಮದ ಆಕರ್ಷಣೆ ನಯನ ಹಾಗೂ ಶಿವರಾಜ್ ಕೆ.ಆರ್ ಪೇಟೆ "ಕಿಲಾಡಿ ಕುಟುಂಬ"ದಲ್ಲಿ ಜಗ್ಗೇಶ್‌ಗೆ ಪೂರಕವಾಗಿ ಕಾಣಿಸಿಕೊಳ್ಳುವರು. "ಕಿಲಾಡಿ ಕುಟುಂಬ" **ಇದೇ ಜೂನ್ 12ರಿಂದ ಸೋಮ– ಶುಕ್ರ ಸಂಜೆ 7 ರಿಂದ 7.30ರವರೆಗೆ ಪ್ರಸಾರವಾಗಲಿದೆ.**

## ಕಿಲಾಡಿ ಕುಟುಂಬ

**ಜೂನ್ 12 ರಿಂದ ಸೋಮ-ಶುಕ್ರ**

**ಸಂಜೆ 7ಕ್ಕೆ**



ಕನ್ನಡ

ವೀಕ್ಷಕರಿಗೆ ಮನರಂಜನೆಯ ರಸದೌತಣವನ್ನು ಒದಗಿಸುತ್ತಲೇ, ಮೌಲ್ಯಯುತ ಕಾರ್ಯಕ್ರಮಗಳೊಂದಿಗೆ ಎಲ್ಲರ ಮನೆ ಮಾತಾಗಿ ಕರ್ನಾಟಕದ ನಂಬರ್ 1 ವಾಹಿನಿಯಾಗುವತ್ತ ದಾಪುಗಾಲಿಡುತ್ತಿದೆ ಜೀ಼ ಕನ್ನಡ ವಾಹಿನಿ. ಫಿಕ್ಷನ್ ವಿಭಾಗದಲ್ಲಿ ನಾಗಿಣಿ, ಮಹಾದೇವಿ, ವಾರಸ್ದಾರ, ಜೋಡಿಹಕ್ಕಿ, ಪತ್ತೆದಾರಿ ಪ್ರತಿಭಾ, ಬ್ರಹ್ಮಗಂಟುವಿನಂತಹ ಕಾರ್ಯಕ್ರಮಗಳನ್ನು ನೀಡಿ ಅಭೂತಪೂರ್ವ ಯಶಸ್ಸು ಸಾಧಿಸಿದೆ.

ಸದಾ ವಿಭಿನ್ನ ಧಾರಾವಾಹಿಗಳನ್ನು ಹೊತ್ತು ತರುವ ಜೀ಼ ಕನ್ನಡ ವಾಹಿನಿ ಪ್ರಸ್ತುತ ವಿಶೇಷ ಕಥಾಹಂದರವುಳ್ಳ 'ಸುಬ್ಬಲಕ್ಷ್ಮಿ ಸಂಸಾರ' ಧಾರಾವಾಹಿ ಮೂಲಕ ಕನ್ನಡದ ವೀಕ್ಷಕರನ್ನು ಮನರಂಜಿಸಲು ಸಜ್ಜಾಗಿದೆ. ಕಥಾನಾಯಕಿ ಸುಬ್ಬಲಕ್ಷ್ಮಿ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಗುರುಮೂರ್ತಿಯ ಪತ್ನಿ. ಗಂಡ ಮತ್ತು ಮಗ ಅಥರ್ವ ಜೊತೆ ಬೆಂಗಳೂರಿನ ಹೈ ಸೊಸೈಟಿಯ ಒಂದು ಅಪಾರ್ಟ್ಮೆಂಟಿನಲ್ಲಿ ವಾಸ. ಮದುವೆಯಾಗಿ ಬೆಂಗಳೂರಿಗೆ ಬಂದು ನೆಲಸಿ ಸುಮಾರು ವರ್ಷಗಳೇ ಕಳೆದರು ಹಳ್ಳಿ ಸೊಗಡಿನ ಭಾಷೆ ಮತ್ತು ಮುಗ್ಧತೆ ಇನ್ನೂ ಮಾಸಿಲ್ಲ. ಇತ್ತ ಗುರುಮೂರ್ತಿಗೆ ತನ್ನ ಹೆಂಡತಿ ಹಳ್ಳಿಯವಳು, ಈಗಿನ ಕಾಲಕ್ಕೆ ಹೊಂದಿಕೊಂಡಿಲ್ಲ ಎಂಬ ಭಾವನೆ, ಹೀಗಾಗಿ ಹೆಂಡತಿ ಮೇಲೆ ತಾತ್ಸಾರ. ತನ್ನ ಆಫೀಸಿನಲ್ಲಿ ಕೆಲಸ ಮಾಡುವ ಶನಾಯ ಎಂಬ ಹುಡುಗಿಯ ಮೇಲೆ ಮೋಹಿತನಾಗಿ ಅವಳೊಂದಿಗೆ ಸಂಬಂಧ ಬೆಳೆಸಿರುತ್ತಾನೆ. ಗಂಡನೇ ದೈವವೆಂದು ತಿಳಿದಿರುವ ಸುಬ್ಬಲಕ್ಷ್ಮಿಗೆ ತನ್ನ ಸಂಸಾರದಲ್ಲಿ ಈ ತರದ ಒಂದು ಬಿರುಕು ಮೂಡಿರುವುದರ ಅರಿವೇ ಆಗಿರುವುದಿಲ್ಲಾ.

ಈ ಹಳ್ಳಿ ಮುಗ್ಧೆ ತನ್ನ ಗಂಡನನ್ನು, ತನ್ನ ಪ್ರೀತಿಯ ಸಂಸಾರವನ್ನು ಹೇಗೆ ಕಾಪಾಡಿಕೊಳ್ಳುತ್ತಾಳೆ ಎನ್ನುವುದೇ ಧಾರಾವಾಹಿಯ ಮುಖ್ಯ ಕಥಾ ಹಂದರ. ಹಸನ್ಮುಖಿಯಾಗಿ ತನ್ನ ಸಂಸಾರವನ್ನು ಪ್ರೀತಿ ಅಲೆಯಲ್ಲಿ ತೇಲಿಸಲು ಪ್ರಯತ್ನಿಸೋ 'ಸುಬ್ಬಲಕ್ಷ್ಮಿ ಸಂಸಾರದ' ಕಥೆ ವೀಕ್ಷಕರ ಮನ ಗೆಲ್ಲುತ್ತದೆ ಎನ್ನುತ್ತಾರೆ ಜೀ಼ ಕನ್ನಡ ವಾಹಿನಿಯ ಬ್ಯುಜಿ಼ನೆಸ್ ಹೆಡ್ ರಾಘವೇಂದ್ರ ಹುಣಸೂರು. ಜೀ಼ ಕನ್ನಡ ವಾಹಿನಿಯ ಗೃಹಲಕ್ಷ್ಮಿ, ಗಂಗಾ ಯಶಸ್ಸಿನ ನಂತರ, ಸುಬ್ಬಲಕ್ಷ್ಮಿ ಸಂಸಾರ ಧಾರಾವಾಹಿಯನ್ನು ಆರ್ ಆರ್ ಆರ್ ಕ್ರಿಯೇಷನ್ಸ್ ಅವರು ನಿರ್ಮಾಣ ಮಾಡುತ್ತಿದ್ದಾರೆ. ಗಜಕೇಸರಿ, ಹೆಬ್ಬುಲಿ ಖ್ಯಾತಿಯ ಕೃಷ್ಣ ಅವರ ಮಾರ್ಗದರ್ಶನದಲ್ಲಿ 'ಸುಬ್ಬಲಕ್ಷ್ಮಿ ಸಂಸಾರ' ಧಾರಾವಾಹಿ ಮೂಡಿಬರುತ್ತಿದ್ದು, ಅವರ ಪತ್ನಿ ಸ್ವಪ್ನಕೃಷ್ಣ ನಿರ್ದೇಶಿಸುತ್ತಿದ್ದಾರೆ. ಈ ಧಾರಾವಾಹಿಯಲ್ಲಿ ಹಿರಿಯ ಕಲಾವಿದರಾದ ಮುಖ್ಯಮಂತ್ರಿ ಚಂದ್ರು, ರಮೇಶ್ ಭಟ್, ಗಿರಿಜಾ ಲೋಕೇಶ್ ಮತ್ತು ರಂಗಭೂಮಿ ಮತ್ತು ಸಿನಿಮಾ ಹಿನ್ನೆಲೆಯ ಪ್ರತಿಭಾವಂತ ನಟಿ ದೀಪ ಭಾಸ್ಕರ್ ಕಥೆಯ ನಾಯಕಿಯಾಗಿ. ಕಿರುತೆರೆ ಕಲಾವಿದರಾದ ಭವಾನಿ ಸಿಂಗ್ ಕಥೆಯ ನಾಯಕನಾಗಿ ಹಾಗೂ ಡ್ರಾಮಾ ಜೂನಿಯರ್ಸ್ ಖ್ಯಾತಿಯ ನಿಹಾಲ್ ಮತ್ತು ಅಪೂರ್ವ ಮತ್ತಿತರರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

**ಇದೇ ಜೂನ್ 12ರಿಂದ ಸೋಮ – ಶುಕ್ರ ಸಂಜೆ 6:30ಕ್ಕೆ** ನಿಮ್ಮ ಜೀ಼ ಕನ್ನಡ ವಾಹಿನಿಯಲ್ಲಿ 'ಸುಬ್ಬಲಕ್ಷ್ಮಿ ಸಂಸಾರ' ಧಾರಾವಾಹಿ ಪ್ರಸಾರವಾಗಲಿದೆ.

ನನ್ನ ಪತಿ 'ಪರ'ದೈವ

## ಸುಬ್ಬಲಕ್ಷ್ಮಿ ಸಂಸಾರ

**ಜೂನ್ 12 ರಿಂದ ಸೋಮ-ಶುಕ್ರ**

**ಸಂಜೆ 6.30ಕ್ಕೆ**

